# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ. 733-2019** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹೆಚ್.ಎಂ.ನಟರಾಜು<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 12-01-2022. |

**ಮುಂದುವರೆದ ಪಾಟೀ ಸವಾಲುಃ  ಶ್ರೀ ಕೆ.ಟಿ.ಆರ್  ವಕೀಲರಿಂದಃ**

5. ಈಗ್ಗೆ 5 ವರ್ಷಗಳ ಹಿಂದೆ ನಾನು ರೈಸ್ ಮಿಲ್, ಕಡಲೇ ಕಾಯಿ ಮಿಲ್ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೆ. ಅದಾದ ಬಳಿಕ ನಾನು ಈಗ ಮನೆ ಕಟ್ಟಿ  ಮಾರಾಟ ಮಾಡುವ ವ್ಯಾಪಾರ ಮಾಡುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಾನು ಆ ರೀತಿ ಮನೆ ಕಟ್ಟಿ ಮಾರಾಟ ಮಾಡುವ ವ್ಯವಹಾರ ಮಾಡುತ್ತಿಲ್ಲ, ಚೆಕ್‌ನ ಮೊತ್ತ ಅಧಿಕವಾಗಿರುವುದರಿಂದ ನಾನು ಅ ರೀತಿ ವ್ಯವಹಾರ ಮಾಡುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಿವೇಶನದ ಮಾಲೀಕರು ಮನೆ ಕಟ್ಟಿಕೊಡಲು ಆರ್ಡರ್ ನೀಡುತ್ತಿದ್ದರು, ಅದನ್ನು ನಿರ್ಮಿಸಿ ನಾನು ಮಾರಾಟ ಮಾಡಿಕೊಡುತ್ತಿದ್ದೆ. ನಾನು ಬರಿ ಬಾಯಿ ಮಾತಿನಲ್ಲಿ ಮನೆ ಕಟ್ಟಿಕೊಡುವ ಕುರಿತು ಖರಾರು ಮಾಡಿಕೊಳ್ಳುತ್ತಿದ್ದೆ, ಈ ಸಂಬಂಧ ನಾನು ಯಾವುದೇ ದಾಖಲೆ ಬರೆಸಿಕೊಂಡಿಲ್ಲ. ಸಾಮಾನ್ಯವಾಗಿ ರೂ.35,00,00/- ಗಳಿಂದ ಒಂದು ಕೋಟಿ ವೆಚ್ಚದವರೆಗೂ ನಾನು ಮನೆ ಕಟ್ಟಿ ಕೊಟ್ಟಿದ್ದೇನೆ. ನಾನು ಪರಿಚಯಸ್ಥರ ಮಾತ್ರ ವ್ಯವಹಾರ ಮಾಡುತ್ತಿದ್ದರಿಂದ ಯಾವುದೇ  ಮನೆ ನಿರ್ಮಾಣದ ಖರಾರು ಪತ್ರವನ್ನು ಬರೆಸಿಕೊಳ್ಳುತ್ತಿರಲಿಲ್ಲ. ನಾನು ಮೇಲೆ ಹೇಳಿದಂತೆ ಯಾವುದೇ ರೀತಿಯ ಮನೆ ಕಟ್ಟುವ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ.

6. ನನಗೆ ಮೇಲೆ ಹೇಳಿದ ರೈಸ್ ಮಿಲ್, ಕಡಲೇ ಕಾಯಿ ಮಿಲ್ ಹಾಗೂ ಮನೆ ಕಟ್ಟುವ ವ್ಯವಹಾರದಿಂದ ಬರುವ ಆದಾಯ ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯದ ಮೂಲಗಳು ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಬಿಲ್ಡಿಂಗ್ ಬಾಡಿಗೆ ಹಣ ಬರುತ್ತದೆ ಹಾಗೂ ಜಮೀನು ಇದೆ ಅದರಿಂದ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ನನಗೆ 4 ಎಕರೆ 25 ಗುಂಟೆ ಗದ್ದೆ ಇದೆ, 1 ಎಕರೆ 19 ಗುಂಟೆ ಹೊಲ ಇರುತ್ತದೆ. ಇದಕ್ಕೆ ಸಂಬಂಧಪಟ್ಟ

ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಮ್ಮ ಗದ್ದೆಯಲ್ಲಿ ನಾನು ವರ್ಷಕ್ಕೊಂದು ಬಾರಿಯಂತೆ ಭತ್ತ ಬೆಳೆಯುತ್ತೇವೆ, ನಮ್ಮ ಹೊಲದಲ್ಲಿ ಹತ್ತಿ ಹಾಗೂ ಎಳ್ಳು ಬೆಳೆಗಳನ್ನು ಬೆಳೆಯುತ್ತೇವೆ. ಗದ್ದೆಯಿಂದ ನನಗೆ ವರ್ಷಕ್ಕೆ ರೂ.1,75,000/- ಆದಾಯ ಬರುತ್ತದೆ, ಹೊಲದಿಂದ ರೂ.1,50,000/- ಆದಾಯ ಇದೆ. (ಈ ಹಂತದಲ್ಲಿ ಆರೋಪಿ ಪರ ವಕೀಲರು ಹೊಲದಲ್ಲಿ ಇರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಿರೋ ಇಲ್ಲವೋ ಎಂದು ಪ್ರಶ್ನೆ ಕೇಳಿದ್ದು ಈ ಪ್ರಕರಣದಲ್ಲಿ ಅದು ಅಸಮಂಜಸವಾಗಿದ್ದು ಅದನ್ನು ತೀರಸ್ಕರಿಸಲಾಯಿತು) ನಾನು ಮೇಲೆ ಹೇಳಿದಂತೆ ನನ್ನ ಜಮೀನುಗಳಿಂದ ನನಗೆ ಅಷ್ಟು ಆದಾಯ ಇದೆ ಎಂದು ತೋರಿಸಲು ನನಗೆ ಬಳಿ ಯಾವುದೇ ದಾಖಲೆ ಇಲ್ಲ.

7. ಆರೋಪಿಗೆ ಅಷ್ಟು ಮೊತ್ತದ ಹಣವನ್ನು ಬ್ಯಾಂಕ್ ಮುಖಾಂತರ ವರ್ಗಾವಣೆ ಮಾಡಲುನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯೂ ಆರೋಪಿ ನನ್ನ ಸ್ನೇಹಿತನಾದ್ದರಿಂದ ಆರೋಪಿಗೆ ನಾನು ಅಷ್ಟು ಸಾಲವನ್ನು ನೀಡಿದ್ದೇನೆ. ಬ್ಯಾಂಕ್ ಮುಖಾಂತರ ವರ್ಗಾವಣೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಪಡೆದುಕೊಂಡಿರುವ ರೂ.48,00,000/- ಸಾಲವನ್ನು ತಿಂಗಳು ಇ.ಎಂ.ಐ ಕಟ್ಟುತ್ತಾ ಮರುಪಾವತಿ ಮಾಡುತ್ತಿದ್ದೇನೆ. ನಾನು ನನ್ನ ಹೊಲದ ಜಮೀನಿಗೆ ಪೆನ್ಸಿಂಗ್, ಮಣ್ಣು ಹೊಡೆಸುವ ಸಲುವಾಗಿ ಹಾಗೂ ಕಾಂಪೌಂಡ್ ಹಾಕಿಸುವ ಸಲುವಾಗಿ ಸದರಿ ಸಾಲ ಪಡೆದುಕೊಂಡಿದ್ದೆ. ಅದರಲ್ಲಿ ರೂ.25,00,000/- ಗಳನ್ನು ಆರೋಪಿಗೆ ನೀಡಿದ್ದರಿಂದ ನನ್ನ ಜಮೀನಿನ ಮೇಲೆ ಹೇಳಿದ ಕೆಲಸವನ್ನು ಪೂರ್ಣಗೊಳಿಸಲು ಆಗಲಿಲ್ಲ. ನಾನು ನನ್ನ ಹೊಲದ ಜಮೀನಿಗೆ ಕಾಂಪೌಂಡ್ ಹಾಕಲು ರೂ.4,00,000/-, ಮಣ್ಣು ಹೊಡಸಲು ರೂ.5,00,000/- ಹಾಗೂ ಪನ್ಸಿಂಗ್ ಗೆ ರೂ.1,00,000/- ಖರ್ಚು ಮಾಡಿದ್ದೇನೆ. ರೂ.2,50,000/- ಹಣದಲ್ಲಿ ನನ್ನ ಗದ್ದೆಗೂ ಕೂಡ ಮಣ್ಣು ಹೊಡೆಸಿದ್ದೇನೆ.

8. ನಾನು ಆರೋಪಿಗೆ ಸದರಿ ಸಾಲವನ್ನು ನನ್ನ ಮನೆಯಲ್ಲಿ ಸಂಜೆ 4.00 ರಿಂದ 5.00 ಗಂಟೆ ಒಳಗೆ ನೀಡಿರುತ್ತೇನೆ. ಆಗ ನಾನು ಮತ್ತು ನನ್ನ ಹೆಂಡತಿ ಮನೆಯಲ್ಲಿ ಇದ್ದೆವು. ನನ್ನ ಹೆಂಡತಿ ಮೃತಪಟ್ಟಿರುತ್ತಾರೆ. ನಾನು ಮೇಲೆ ಹೇಳಿದಂತೆ ಆರೋಪಿಗೆ ಸಾಲ ನೀಡಿಲ್ಲ, ಆ ರೀತಿ ನನ್ನ ಸಮಕ್ಷಮ ನಾನು ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾರಿಗಾದರೂ ಹಣ ಪಾವತಿ ಮಾಡಿದಾಗ ಅವರಿಂದ ರಶೀದಿ ಪಡೆಕೊಳ್ಳಬೇಕು ಎಂಬ ವಿಚಾರ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ರೂ.2,00,000/- ಕ್ಕಿಂತ ಹೆಚ್ಚಿನ ಹಣವನ್ನು

ಯಾರಿಗಾದರೂ ನೀಡಬೇಕಾದಲ್ಲಿ ಬ್ಯಾಂಕ್ ಖಾತೆ ಮೂಲಕ ವರ್ಗಾವಣೆ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ. ನಾನು ವ್ಯವಹಾರಸ್ಥನಾಗಿದ್ದು ಮೇಲೆ ಹೇಳಿದ ವಿಷಯ ನನಗೆ ಚೆನ್ನಾಗಿ ಗೊತ್ತಿದ್ದರು ಕೂಡ ನಾನು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನೀವು ಲೇವಾ ದೇವಿ ವ್ಯವಹಾರ ಮಾಡುತ್ತೀರಾ ಎಂದರೆ ಸಾಕ್ಷಿಯು ಇಲ್ಲ ನಾನು ನನಗೆ ಬೇಕಾದವರಿಗೆ ಮಾತ್ರ ಸಾಲ ನೀಡಿ ಅದನ್ನು ವಾಪಸ್ಸು ಪಡೆದಕೊಳ್ಳುತ್ತೇನೆ ಆ ರೀತಿ ಸಾಲ ನೀಡಿ ಅದಕ್ಕ ಪ್ರತಿಫಲವಾಗಿ ಬಡ್ಡಿ ಪಡೆದುಕೊಳ್ಳುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**